**ದಿನಾಂಕಃ 24.04.2025 ರಂದು ಸಾಕ್ಷಿದಾರರು ಹಾಜರಿದ್ದು, ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ.ಜಿ.ಸಿ. ವಕೀಲರಿಂದಃ–**

1. ನಾನು ಈ ಪ್ರಕರಣದಲ್ಲಿ ವಾದಿಗಳ ಪರವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ. ನನಗೆ ಈ ಪ್ರಕರಣದ ಎಲ್ಲಾ ಅಂಶಗಳು ತಿಳಿದಿರುತ್ತವೆ. ಈ ದಿನ ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅವುಗಳನ್ನು ನಾನೇ ಹೇಳಿ ಬರೆಸಿದ್ದೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

**ಪಾಟೀ–ಸವಾಲುಃ ಪ್ರತಿವಾದಿಗಳ ಪರ ಶ್ರೀ.ಎಸ್ ಎಸ್ ವಕೀಲರಿಂದಃ–**

2. ವಾದಿಗಳು ಒಟ್ಟು ಇಬ್ಬರ ವಿರುದ್ಧ ದಾವೆ ಹೂಡಿದ್ದಾರೆ. ಅವರುಗಳೆಂದರೆ ಚಿತ್ತಣ್ಣ ಮತ್ತು ಮಾರಣ್ಣ. ಚಿತ್ತಣ್ಣ ಅವರ ತಂದೆಯ ಹೆಸರು ಮಾರನಾಯಕ. ಅವರನ್ನು ಕರಿಮಾರಪ್ಪ, ಮಾರಪ್ಪ, ಮಾರಜ್ಜ ಎಂದೂ ಸಹ ಕರೆಯುತ್ತಿದ್ದರು ಎಂದರೆ ಸರಿ. ಸದರಿ ಮಾರನಾಯಕ ಅವರ ತಂದೆ ಮತ್ತು ತಾಯಿಯ ಹೆಸರು ನನಗೆ ಗೊತ್ತಿಲ್ಲ. ಸದರಿ ಮಾರನಾಯಕ ಅವರಿಗೆ 3 ಜನ ಸಹೋದರರು. ಈರನಾಯಕ ಅವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಈರನಾಯಕ ಅವರ ಹೆಂಡತಿಯ ಹೆಸರು ನನಗೆ ಗೊತ್ತಿಲ್ಲ. ಚಿತ್ತನಾಯಕ ಅವರ ಹೆಂಡತಿಯ ಹೆಸರು ಪುಟ್ಟಮ್ಮ ಅವರಿಗೆ 4–5 ಜನ ಮಕ್ಕಳು ಇದ್ದಾರೆ.

3. ಮಾರನಾಯಕ ಅವರ ಮಗ ಚಿತ್ತಯ್ಯ ಅವರಿಗೆ ಒಬ್ಬನೇ ಮಗ. ಅವರಿಗೆ ಮಗಳು ಇದ್ದಾಳೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತು. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನಾನು ಹೇಳಿ ಬರೆಸಿರುತ್ತೇನೆ. ನಾನು ಕೋಡಿಹಳ್ಳಿ ಗ್ರಾಮದಲ್ಲಿ ವಾಸವಿದ್ದೇನೆ. ವಾದಿಗಳು ಯಾವ ಊರಿನಲ್ಲಿ ವಾಸವಿದ್ದಾರೆ ಎಂದು ನನಗೆ ಗೊತ್ತಿಲ್ಲ.

4. ವಾದಿ ಎರಡು ಆಸ್ತಿಗಳ ಮೇಲೆ ದಾವೆ ಹೂಡಿದ್ದಾರೆ. ಅವುಗಳ ಸರ್ವೆ ನಂಬರ್, ಚೆಕ್ಕುಬಂಧಿ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ಕೋಡಿಹಳ್ಳಿ ಗ್ರಾಮದಲ್ಲಿವೆ. ದಾವಾ ಸ್ವತ್ತುಗಳು ವಾದಿಗಳಿಗೆ ಅವರ

ತಂದೆಯಿಂದ ಬಂದಿರುತ್ತವೆ. ದಾವಾ ಸ್ವತ್ತನ್ನು ವಾದಿಗಳ ತಂದೆ ಮಾರನಾಯಕ ಅವರು ಖರೀದಿ ಮಾಡಿರುತ್ತಾರೆ. ಮಾರನಾಯಕ ಅವರು ದಾವಾ ಸ್ವತ್ತುಗಳನ್ನು ಖರೀದಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ವಾದಿಗಳ ತಂದೆ ಮಾರನಾಯಕ ಅವರಿಗೆ ಸೇರಿದ್ದು ಅಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಈಗ ಯಾರ ಹೆಸರಿನಲ್ಲಿವೆ ಎಂದು ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ–ಸವಾಲುಃ ಪ್ರತಿವಾದಿಗಳ ಪರ ವಕೀಲರು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.